ಭಕ್ತರಿಗೆ ರಾಮಚಂದ್ರ ದತ್ತನ ಬಗ್ಗೆ ವಿಶೇಷ ಪ್ರೀತಿ ಹಾಗೂ ಗೌರವವಿದ್ದಿತು. ಅವರೆಲ್ಲರ ಸಂಗದಲ್ಲಿ ನರೇಂದ್ರನಾಥನಿಗೂ ವೈಷ್ಣವ ಆಚಾರ ವಿಚಾರಗಳ ಬಗ್ಗೆ ತುಂಬ ಆಸಕ್ತಿ ಮೂಡಿತು. ತನ್ನ ಅಜ್ಜಿ ರಘುಮಣಿದೇವಿ ಹಾಗೂ ಅವರ ತಾಯಿ ರಾಯಿಮಣಿಯವರ ತರಹ ನರೇಂದ್ರ ಕೂಡ ಎಷ್ಟೋ ವರ್ಷಗಳವರೆಗೆ ಸಂಪೂರ್ಣ ಶಾಖಾಹಾರಿ ಆಹಾರವನ್ನೇ ಸೇವಿಸುತ್ತಿದ್ದ.

ವಿಶ್ವನಾಥದತ್ತರ ಮನೆ ಯಾವಾಗಲೂ ಜನರಿಂದ ತುಂಬಿದ್ದು ಸತತವಾಗಿ ಗದ್ದಲದ ವಾತಾವರಣವಿರುತ್ತಿತ್ತು. ಧ್ಯಾನ ಹಾಗೂ ಜಪಗಳ ಬಗ್ಗೆ ವಿಶೇಷ ಒಲವು ಹೊಂದಿದ್ದ ನರೇಂದ್ರನಿಗೆ ತನ್ನ ತಂದೆಯ ಮನೆಯಲ್ಲಿ ಇರುವುದು ಬಹಳ ಕಷ್ಟದಾಯಕವೆನಿಸುತ್ತಿತ್ತು. ಅದಕ್ಕಾಗಿ ನರೇಂದ್ರನಾಥನು ರಾಮತನು ಬೋಸ್ ಹಾದಿಯಲ್ಲಿದ್ದ ತನ್ನ ಅಜ್ಜಿ ರಘುಮಣಿದೇವಿಯ ಮನೆಯಲ್ಲಿ ಇರುವುದನ್ನೇ ಇಷ್ಟಪಡುತ್ತಿದ್ದ. ಆ ಮನೆಯಲ್ಲಿ ರಘುಮಣಿದೇವಿ ಹಾಗೂ ಕೆಲವೇ ಕೆಲಸದವರು ಇರುತ್ತಿದ್ದು ಅಲ್ಲಿ ತುಂಬ ಪ್ರಶಾಂತವಾದ ವಾತಾವರಣ ಇರುತ್ತಿತ್ತು. ನರೇಂದ್ರನಾಥ ಅಲ್ಲಿಯೇ ಎರಡನೇ ಮಹಡಿಯಲ್ಲಿದ್ದ ಒಂದು ಚಿಕ್ಕ ಕೊಠಡಿಯಲ್ಲಿರುತ್ತಿದ್ದ. ಮನೆಯ ಹೊರಗಿನಿಂದಲೇ ಆ ಕೋಣೆಗೆ ಹೋಗಲು ಮೆಟ್ಟಿಲುಗಳಿದ್ದವು. ನರೇಂದ್ರನ ಗೆಳೆಯರು ನೇರವಾಗಿ ಅವನ ಕೋಣೆಗೆ ಹೋಗಿ, ಅಲ್ಲಿಯೇ ಅವನನ್ನು ಭೇಟಿಮಾಡುತ್ತಿದ್ದರು. ನರೇಂದ್ರನಾಥ ತನ್ನ ಗೆಳೆಯರನ್ನೆಲ್ಲ ಆಮಂತ್ರಿಸಿ, ''ಬನ್ನಿ, ನಾವೆಲ್ಲ 'ಟಾಂಗ್' (Tong ಅಂದರೆ ಚೈನಾದ ಗುಪ್ತ ಸ್ಥಳಗಳು. ಅಲ್ಲಿ ಯಾವ ಕೃತ್ಯವೆಸಗುವುದು ಎಂಬ ಗುಪ್ತ ಸಮಾಲೋಚನೆ ನಡೆಯುತ್ತಿತ್ತು) ರೂಮಿನಲ್ಲಿ ಕುಳಿತು ಮಾತನಾಡೋಣ'' ಎನ್ನುತ್ತಿದ್ದ. ಆ ಕೋಣೆ ಬರಿ ನಾಲ್ಕು ಅಡಿ ಅಗಲ ಹಾಗೂ ಎಂಟು ಅಡಿಗಳಷ್ಟು ಉದ್ದವಾಗಿದ್ದಿತು. ಅದರಲ್ಲಿಯೇ ಒಂದು ಕ್ಯಾನ್‌ವಾಸಿನ ಮಂಚ ಮತ್ತು ಬಣ್ಣ ಮಾಸಿದ ಒಂದು ತಲೆದಿಂಬು ಇತ್ತು. ನೆಲದ ಮೇಲೆ ಕಿತ್ತುಹೋದ ಒಂದು ತಟ್ಟಿನ ತುಂಡು ಅಲ್ಲಿಯೇ ಇತ್ತು. ಒಂದು ಮೂಲೆಯಲ್ಲಿ ಒಂದು ಸಿತಾರ, ಒಂದು ತಾನಪುರ ಹಾಗೂ ಒಂದು ಜತೆ ತಬಲಗಳಿದ್ದವು. ಕೆಲವೊಮ್ಮೆ ತಬಲಗಳು ತಟ್ಟಿನ ಮೇಲೆ, ಕೆಲವೊಮ್ಮೆ ಮಂಚದ ಕೆಳಗೆ ಇರುತ್ತಿದ್ದವು. ಒಂದೆಡೆ ಹುಕ್ಕಾದ ಚಿಲುಮೆ ಇತ್ತು. ಎಲ್ಲಾ ಕಡೆಗೂ ಪುಸ್ತಕಗಳು ಕಾಣಬರುತ್ತಿದ್ದವು. ಶ್ರೀರಾಮಕೃಷ್ಣರು ನರೇಂದ್ರನನ್ನು ಕಾಣಲು ಎಷ್ಟೋ ಸಾರಿ ಇದೇ ಕೊಠಡಿಗೆ ಬಂದು ಹೋಗಿದ್ದರು.

ರಘುಮಣಿ ದೇವಿಯ ತಾಯಿ ರಾಯಿಮಣಿ ಕೂಡ ತನ್ನ ಪತಿಯ ಮರಣಾನಂತರ ಇದೇ ಮನೆಯಲ್ಲಿಯೇ ವಾಸಿಸತೊಡಗಿದಳು. ನರೇಂದ್ರನಾಥ ಅವಳನ್ನು 'ಝೀಮಾ' ಎಂದು ಸಂಬೋಧಿಸುತ್ತಿದ್ದ. ರಘುಮಣಿ ಹಾಗೂ ರಾಯಿಮಣಿ ಇಬ್ಬರೂ ತಮ್ಮ ಮೊಮ್ಮಕ್ಕಳಿಗೆ ಬೇರೆ ಬೇರೆ ಕಥೆಗಳನ್ನು ಹೇಳುತ್ತಿದ್ದರು. ಅವುಗಳನ್ನು ಬಹಳ ಆಸಕ್ತಿವಹಿಸಿ ಕೇಳಿ ಆನಂದಿಸುತ್ತಿದ್ದ ನರೇಂದ್ರ ತನ್ನ ಪಾಶ್ಚಿಮಾತ್ಯ ಗೆಳೆಯರಿಗೆ ಅವುಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿ ಹೇಳುತ್ತಿದ್ದ ಹಾಗೂ ಮುಂದಿನ ದಿನಗಳಲ್ಲಿ ಬಂದ ಪಾಶ್ಚಿಮಾತ್ಯ ಭಕ್ತರಿಗೂ ಅವುಗಳನ್ನೇ ಇಂಗ್ಲಿಷಿನಲ್ಲಿ ಹೇಳಿದ.

೧೮೯೮ರಲ್ಲಿ ಸ್ವಾಮಿ ವಿವೇಕಾನಂದರ ಆಪ್ತ ಶಿಷ್ಯ ಗುಡ್‌ವಿನ್ ಭಾರತಕ್ಕೆ ಬಂದಿದ್ದನು. ಆಗ ವಿವೇಕಾನಂದರ ತಾಯಿ ಭುವನೇಶ್ವರೀ ದೇವಿ ಹಾಗೂ ಅಜ್ಜಿ ರಘುಮಣಿದೇವಿಯರನ್ನು ಭೇಟಿಯಾಗಲು ಅವರ ಮನೆಗೆ ಹೋದಾಗ ಅವರ ಪಾದಗಳನ್ನು ಸ್ಪರ್ಶಿಸಿ ನಮಸ್ಕರಿಸಿದ. ಕೂಡಲೇ ಮಡಿವಂತೆಯಾಗಿದ್ದ ರಘುಮಣಿ ಮ್ಲೇಚ್ಛನಾದ ಗುಡ್‌ವಿನ್ ತನ್ನನ್ನು ಸ್ಪರ್ಶಿಸಿದ ಎಂದು ತಲೆಸ್ನಾನ ಮಾಡಿದಳು. ಮೊದಲೇ ಚಳಿಗಾಲವಿದ್ದುದ್ದರಿಂದ ತಂಪು ಅಡರಿ, ವಿಪರೀತ ತಲೆಸಿಡಿತ ಹಾಗೂ ನೆಗಡಿಯಿಂದ ಅವಳು ಬಳಲಬೇಕಾಯಿತು. ಆಗ ರಘುಮಣಿ ದೇವಿ ತಾನೇ ಸ್ವತಃ ತನ್ನ ವರ್ತನೆಗೆ ಜುಗುಪ್ಸೆಗೊಂಡು ಹೇಳುತ್ತಾಳೆ: ''ಪಾಪ, ಗುಡ್‌ವಿನ್‌ನ ಮನಸ್ಸನ್ನು ನೋಯಿಸಿ ನಾನು ಪಾಪವನ್ನೆಸಗಿದೆ. ಅವನೂ ಕೂಡ ಶಾಖಾಹಾರಿಯೇ ಇದ್ದು ಪ್ರತಿದಿನ ಗಂಗಾಸ್ನಾನವನ್ನೂ ಮಾಡುತ್ತಾನೆ. ಅವನೇನು ಯಾವ ವೈಷ್ಣವರಿಗೂ ಕಡಿಮೆಯಿಲ್ಲ. ಇಂಥವನ ಭಾವನೆಗೆ ಅನಾದರ ತೋರಿ ನಾನು ತಪ್ಪು ಮಾಡಿದೆ. ಅದಕ್ಕೇ ಭಗವಂತ ನನಗೆ ಈ ನೆಗಡಿ ಕಾಯಿಲೆ ತಂದು ಶಿಕ್ಷಿಸುತ್ತಿದ್ದಾನೆ'' ಎನ್ನುತ್ತ ಪಶ್ಚಾತ್ತಾಪಪಟ್ಟುಕೊಂಡಳು.

ರಘುಮಣಿದೇವಿ ತನ್ನ ಮೊಮ್ಮಕ್ಕಳ ಏಳಿಗೆಗಾಗಿ ಬಹಳಷ್ಟು ಕಷ್ಟ ಅನುಭವಿಸಿದಳು. ಭುವನೇಶ್ವರಿದೇವಿಯ ಪರವಾಗಿ ಅವಳು ಕೋರ್ಟಿನ ವ್ಯಾಜ್ಯದ ಖರ್ಚಿನ ನಿರ್ವಹಣೆಗಾಗಿ ಬಲರಾಮ ದೇಓಣಿಯಲ್ಲಿದ್ದ ತನ್ನ ಜಮೀನನ್ನೂ ಕೂಡ ಮಾರಲು ಹಿಂದೆ ಮುಂದೆ ನೋಡಲಿಲ್ಲ. ಆ ಸಮಯದಲ್ಲಿ ಸ್ವಾಮಿ ವಿವೇಕಾನಂದರು ದೂರದ ದೇಶದಲ್ಲಿ ಇದ್ದರು. ಅವರಿಗೆ ತನ್ನ ಅಜ್ಜಿಯ ನಿಸ್ವಾರ್ಥ ಭಾವ ಹಾಗೂ ತ್ಯಾಗಗಳ ಹೃದಯವೈಶಾಲ್ಯತೆಯನ್ನು ಕಂಡು ಹೆಮ್ಮೆಯಿಂದ ಮನದಲ್ಲಿಯೇ ಅವಳಿಗೆ ನಮಸ್ಕರಿಸಿದರು.

ಮನುಷ್ಯನಿಗೆ ಯಾವಾಗಲೂ ಬರೀ ಕಷ್ಟದ ದಿನಗಳೇ ಇರುವುದಿಲ್ಲವಲ್ಲ. ಅವಳಿಗೆ ತನ್ನ ಮೊಮ್ಮಕ್ಕಳ ಏಳಿಗೆಯನ್ನು ಕಾಣುವ ಸೌಭಾಗ್ಯ ಒದಗಿ ಬಂದಿತು. ಸ್ವಾಮಿ ವಿವೇಕಾನಂದರ ಪರಮಭಕ್ತ ಹಾಗೂ ಆತ್ಮೀಯ ಗೆಳೆಯನಾಗಿದ್ದ ಖೇತ್ರಿಯ ಮಹಾರಾಜ ಅಜಿತ್‌ಸಿಂಗ್ ಪ್ರತಿತಿಂಗಳು ಸಂಸಾರ ನಿರ್ವಹಣೆಗಾಗಿ ಭುವನೇಶ್ವರೀ ದೇವಿಗೆ ಒಂದು ನೂರು ರೂಪಾಯಿಗಳನ್ನು ಕಳುಹಿಸಲಾರಂಭಿಸಿದ. ಇದರಿಂದ ಅವರ ಹಣದ ಸಂಕಟ ಎಷ್ಟೋ ಕಡಿಮೆಯಾಯಿತು. ಹಣವನ್ನು ಸ್ವೀಕರಿಸುತ್ತಿದ್ದ ಮಹೇಂದ್ರನಾಥ (ನರೇಂದ್ರನಾಥನ ತಮ್ಮ) ರಾಜಾ ಅಜಿತ್‌ಸಿಂಗನಿಗೆ ''ನನ್ನ ತಾಯಿ ಮತ್ತು ರಘುಮಣಿ ಅಜ್ಜಿ ನಿಮಗೆ ಹೃದಯಪೂರ್ವಕ ಆಶೀರ್ವಾದಗಳನ್ನು ಕಳುಹಿಸುತ್ತಿದ್ದಾರೆ'' ಎಂದು ಉತ್ತರಿಸುತ್ತಿದ್ದ.

ಸ್ವಾಮಿ ವಿವೇಕಾನಂದರು ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಬೇಲೂರು ಮಠದಲ್ಲಿ ವಾಸಿಸುತ್ತಿದ್ದರು. ಮೇಲಿಂದ

ಮೇಲೆ ತಮ್ಮ ತಾಯಿ ಹಾಗೂ ಅಜ್ಜಿ ರಘುಮಣಿಯನ್ನು ಭೇಟಿಯಾಗುತ್ತಿದ್ದರು. ಅಜ್ಜಿಗೆ ಹೇಳಿ, ''ನನಗೆ ನೀನು ಮಾಡುತ್ತಿದ್ದ 'ಶೂಕ್ತೋ' ಪಲ್ಯವನ್ನು ತಿನ್ನುವುದು ಬಹಳ ಇಷ್ಟ. ಹಾಗೆಯೇ 'ಮೋಚಾರ್ ಘೊಂಟಾ' (ಬಾಳೆಯ ಹೂವಿನ ಸಾರು) ಕೂಡ ಮಾಡಿಕೊಡು'' ಎಂದು ಒತ್ತಾಯಿಸುತ್ತಿದ್ದರು. ವಿಶ್ವವಿಜೇತನಾಗಿ ಬಂದಿದ್ದ ಮೊಮ್ಮಗನಿಗೆ ಅತ್ಯಂತ ಪ್ರೀತಿಯಿಂದ ತಯಾರಿಸಿ ರಘುಮಣಿದೇವಿ ಬಡಿಸಿದಳು.

(ಶುಕ್ತೋ ಎಂದರೆ ನಾನಾ ತರಹದ ತರಕಾರಿಗಳನ್ನು ಉಪಯೋಗಿಸಿ ಮಾಡುವ ಒಂದು ಬಂಗಾಳಿ ಭಕ್ಷ್ಯ. ಇದನ್ನು ವಿಶೇಷವಾಗಿ ದುರ್ಗಾಪೂಜೆಯ ಸಮಯದಲ್ಲಿ ಅಥವಾ ಮದುವೆ ಮುಂತಾದ ಸಮಾರಂಭಗಳಲ್ಲಿ ತಯಾರಿಸಲಾಗುತ್ತದೆ. ಕ್ಯಾರೆಟ್, ಹಸಿಬಾಳೆಹಣ್ಣು, ಆಲೂಗಡ್ಡೆ, ಹಾಗಲಕಾಯಿ, ಸ್ವಲ್ಪ ಅವರೇಕಾಯಿ, ನುಗ್ಗೇ ಕಾಯಿ, ತುಂಡುಶುಂಠಿ, ಮೆಣಸಿನಕಾಯಿಗಳನ್ನು ಸಾಸಿವೆಯ ಎಣ್ಣೆಯಲ್ಲಿ ಹುರಿದು ಇಟ್ಟುಕೊಂಡು, ಸಾಸಿವೆ ಕಾಳು, ಗಸಗಸೆ ಹಾಗೂ ಹಾಲಿನ ಮಿಶ್ರಣವನ್ನು ಮಾಡಿ ರುಬ್ಬಿಟ್ಟುಕೊಳ್ಳುತ್ತಾರೆ. ಈ ತರಕಾರಿಗಳನ್ನು ಹಾಲಿನ ಈ ಮಿಶ್ರಣಕ್ಕೆ ಸೇರಿಸಿ ಮೃದುವಾಗಿ ಬೇಯಿಸಿಕೊಳ್ಳುತ್ತಾರೆ. ಇದನ್ನು ಚಪಾತಿ ಅಥವಾ ಅನ್ನದೊಂದಿಗೆ ಸೇವಿಸುತ್ತಾರೆ.)

ರಘುಮಣಿ ಹಾಗೂ ಸ್ವಾಮಿ ವಿವೇಕಾನಂದರ ಸಂಬಂಧ ತುಂಬ ಮಧುರವಾದ ಬಾಂಧವ್ಯವಾಗಿತ್ತು. ಜಗತ್ಪ್ರಸಿದ್ಧಿಯನ್ನು ಪಡೆದ ಮೊಮ್ಮಗನಿಗೆ ರಘುಮಣಿ ದೇವಿ ಒಂದು ಸಾರಿ, ''ಮಗು ಜಗತ್ತನ್ನೇ ನಿನ್ನ ಮುಷ್ಟಿಯಲ್ಲಿ ಹಿಡಿದಿರುವೆ. ಎಲ್ಲವನ್ನೂ ದೊರಕಿಸಿದ್ದೀಯೆ. ಬರೀ ಮದುವೆ ಮಾಡಿಕೊಳ್ಳುವುದು ಮಾತ್ರ ಬಾಕಿ ಇದೆ. ಬೇಗ ಮದುವೆ ಮಾಡಿಕೊಂಡು ಬಿಡು ಕಂದ'' ಎಂದಳು. ಅವಳ ಮಾತುಗಳನ್ನು ಕೇಳಿ ಸ್ವಾಮೀಜಿ ಬಿದ್ದು ಬಿದ್ದು ನಕ್ಕರು.

ರಘುಮಣಿ ಸಂಸಾರದ ಬಹಳಷ್ಟು ಏಳುಬೀಳುಗಳನ್ನು ಅನುಭವಿಸಿ ತನ್ನ ತೊಂಬತ್ತನೆಯ ವಯಸ್ಸಿನಲ್ಲಿ, ೨೭ನೇ ೧೯೧೧ರ ಜುಲೈ ೨೭ರಂದು ಇಹಲೋಕಯಾತ್ರೆ ಮುಗಿಸಿದಳು. ಇವಳ ಮರಣದ ಎರಡೇ ಎರಡು ದಿನ ಮೊದಲು ಭುವನೇಶ್ವರೀ ದೇವಿ ಮೆದುಳು ಜ್ವರ ಬಂದು (Meningitis) ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ಅಸುನೀಗಿದ್ದಳು.

ವೀರೇಶ್ವರ ಶಿವ ಸ್ವರೂಪಿ ಸ್ವಾಮಿ ವಿವೇಕಾನಂದರ ತಾಯಿಯ ತಾಯಿಯಾಗಿದ್ದ ರಘುಮಣಿದೇವಿ ಶಿವನೊಡನೆ ಕಾಲಕಳೆಯುವ ದುರ್ಲಭ ಸೌಭಾಗ್ಯವನ್ನು ಹೊಂದಿದವಳಾಗಿದ್ದಳು. ✿

## ಶ್ರೀಮಾತೆಯವರ ಉಪದೇಶಗಳು



❉ ಶ್ರೀರಾಮಕೃಷ್ಣರ ನಾಮ ವ್ಯರ್ಥವಾಗಿ ಹೋಗಲು ಅದೊಂದು ಕ್ಷುಲ್ಲಕವಾದ ವಸ್ತುವೆ? ಯಾವ ಕಾರಣದಿಂದಲೂ ಅವರ ನಾಮ ವ್ಯರ್ಥವಾಗಲಾರದು. ಯಾರು ಶ್ರೀರಾಮಕೃಷ್ಣರನ್ನು ನೆನೆದು ಇಲ್ಲಿಗೆ ಬಂದಿದ್ದಾರೋ, ಅವರಿಗೆ ಇಷ್ಟದೇವತೆಯ ದರ್ಶನವಾಗಲೇಬೇಕು. ಬೇರೆ ಯಾವ ಸಮಯದಲ್ಲಿ ಅದು ಆಗದಿದ್ದರೂ, ಕಡೇಪಕ್ಷ ಅವರ ಸಾವಿನ ಹಿಂದಿನ ಕ್ಷಣದಲ್ಲಾದರೂ ಆಗಿಯೇ ತೀರುವುದು.

❉ ಮಗೂ, ಮೊದಲು ಮನಸ್ಸಿನ ಮಾತನ್ನು ಕೇಳು. ಮನಸ್ಸೇ ಮೊದಲ ಗುರು.

❉ **ಒಬ್ಬ ಭಕ್ತ :** ನಾವು ಶ್ರೀಮಾತೆಯವರ ಪಾದ ಸ್ಪರ್ಶ ಮಾಡಿ ಪ್ರಣಾಮ ಮಾಡಿದರೆ ಅವರಿಗೆ ತುಂಬ ಕಷ್ಟವಾಗುತ್ತದೆ, ಆದ್ದರಿಂದ ನಾವು ಹಾಗಿ ಮಾಡಲಿಲ್ಲ.

**ಶ್ರೀಮಾತೆ :** (ಅದನ್ನು ಕೇಳಿ) ಇಲ್ಲ ಮಗೂ, ನಾವು ಅದಕ್ಕಾಗಿಯೇ ಬಂದಿದ್ದೇವೆ. ನಾವು ಪಾಪ, ತಾಪಗಳನ್ನು ಸ್ವೀಕರಿಸದೆ ಹೋದರೆ, ಅದನ್ನು ಜೀರ್ಣಿಸಿಕೊಳ್ಳದೆ ಹೋದರೆ ಇನ್ನು ಯಾರು ಅದನ್ನು ಮಾಡುವರು? ಪಾಪಿ, ತಾಪಿಗಳ ಭಾರವನ್ನು ಇನ್ನು ಯಾರು ಸಹಿಸಿಕೊಳ್ಳಬಲ್ಲರು? ಆದರೆ ಯಾರು ಒಳ್ಳೆಯ ಶಿಷ್ಯಂದಿರೋ, ಅವರ ಪಾದಸ್ಪರ್ಶ ಮಾಡಿದರೆ ಅದರಿಂದ ಏನೂ ತೊಂದರೆಯುಂಟಾಗದು. ಆದರೆ ಕೆಲವರಿರುತ್ತಾರೆ, ಅವರು ಸ್ಪರ್ಶ ಮಾಡಿದ ಕೂಡಲೇ ಪಾದದಲ್ಲಿ ಒಂದೇ ಬಾರಿಗೆ ಉರಿಯೇಳುತ್ತದೆ.

❉ ಜಗತ್ತಿನಲ್ಲಿ ಎಷ್ಟೊಂದು ಬಗೆಯ ಜನರಿರುತ್ತಾರೆ! ಎಲ್ಲವನ್ನೂ ಸಹಿಸಿಕೊಂಡು ಇರಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, 'ಶ, ಷ, ಸ' ಅಂತ ಮೂರು ಬಗೆಯ ಸಕಾರಗಳಿವೆ ಅಂತ. (ಬಂಗಾಳಿಯಲ್ಲಿ ಮೂರು ಅಕ್ಷರಗಳ ಉಚ್ಚಾರವೂ ಒಂದೇ. 'ಸ' ಎಂದರೆ ಸಹಿಸು ಎಂದರ್ಥ.) ಯಾರು ಸಹಿಸುವನೋ ಅವನು ಮಾತ್ರ ಉಳಿಯುವನು.

❉ ಯಾರು ಶ್ರೀರಾಮಕೃಷ್ಣರನ್ನು ಒಂದು ಸಲವಾದರೂ ಭಕ್ತಿಯಿಂದ ಪ್ರಾರ್ಥಿಸುತ್ತಾರೋ ಅವರಿಗೆ ಇನ್ನೇನೂ ಭಯ ಬೇಕಿಲ್ಲ. ಶ್ರೀರಾಮಕೃಷ್ಣರನ್ನು ಪ್ರಾರ್ಥಿಸುತ್ತ ಅವರ ಕೃಪೆಯುಂಟಾದರೆ, ಅನಂತರ ಪ್ರೇಮಭಕ್ತಿಯುಂಟಾಗುವುದು. ಈ ಪ್ರೇಮಭಕ್ತಿ ಅತ್ಯಂತ ಗೋಪ್ಯವಾದ ವಸ್ತು . ವ್ರಜಗೋಪಿಯರಿಗೆ ಈ ಪ್ರೇಮಭಕ್ತಿಯುಂಟಾಗಿತ್ತು .

*('ಶ್ರೀಶಾರದಾದೇವಿ ವಚನವೇದ', ಪು.೪೭೬–೫೦೦)*

# ‘ಮೂರೂ ಕೂಡಿದ ಪೂರ್ವ ಸುಕೃತ’

ಸಿ.ಎಸ್.ಮಂಗಳಮ್ಮ

ದಿವ್ಯತ್ರಯರ ಜೀವನದ ಬಗ್ಗೆ ಚಿಂತಿಸಿದಷ್ಟೂ ಅವರ ಅಲೌಕಿಕ ವ್ಯಕ್ತಿತ್ವದ ಅಚ್ಚರಿಗಳು ಅನಾವರಣಗೊಳ್ಳುತ್ತವೆ. ಈ ಕುರಿತ ಚಿಂತನೆಯೇ ಒಂದು ಸಾಧನೆ. ಲೇಖಕಿ ಮೈಸೂರು ಶ್ರೀರಾಮಕೃಷ್ಣಆಶ್ರಮದ ಭಕ್ತರು. ಅನೇಕ ಗ್ರಂಥಗಳನ್ನು ರಚಿಸಿರುವ ಅವರು ಈ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ, ಅನೇಕ ಮೌಲಿಕ ಗ್ರಂಥಗಳನ್ನೂ ರಚಿಸಿದ್ದಾರೆ.

‘ಮೂರೂ ಕೂಡಿದ ಪೂರ್ವ ಸುಕೃತ’ ಇದೊಂದು ಆಡು ಮಾತು. ಒಂದು ಕಾರ್ಯ ಯಶಸ್ವಿಯಾಗಿ ಸಂಪನ್ನಗೊಂಡಾಗ ಹೇಳುವ ಮಹದಾನಂದದ ನುಡಿ. ‘ಮೂರು’ ಬೆಸ ಸಂಖ್ಯೆ. ಸಾಮಾನ್ಯವಾಗಿ ಶುಭಕಾರ್ಯಗಳಲ್ಲಿ ಈ ಬೆಸ ಸಂಖ್ಯೆಯ ವಸ್ತುಗಳನ್ನಾಗಲೀ, ಬೇರೆ ಯಾವುದೇ ರೀತಿಯದಾಗಿರಲಿ ಉಪಯೋಗಿಸುವುದಿಲ್ಲ. ಆದರೆ ‘ಮೂರೂ ಕೂಡಿದಾಗ ಪೂರ್ವ ಸುಕೃತ’ ಎನ್ನುವುದು ವಿಶೇಷತೆ. ಪ್ರಪಂಚದಲ್ಲಿ ಸೃಷ್ಟಿ, ಸ್ಥಿತಿ, ಲಯವೆನ್ನುವುದು ಪೂರ್ಣತೆಯ ಬಿಡಿ ಭಾಗಗಳಿದ್ದಂತೆ. ಒಂದು ವಾಕ್ಯ ಪೂರ್ಣ ಅರ್ಥವನ್ನು ಕೊಡಬೇಕಾದರೆ ಕರ್ತೃ, ಕರ್ಮ, ಕ್ರಿಯೆ ಇರಲೇಬೇಕು. ಗುರುವಿನಲ್ಲಿ ಜಗದೊಡೆಯರಾದ ತ್ರಿಮೂರ್ತಿಗಳನ್ನು ಕಾಣುತ್ತೇವೆ. ಮನುಷ್ಯನ ಗುಣಗಳು ಮೂರು. ಸತ್ತ್ವ, ರಜಸ್ಸು, ತಮಸ್ಸು. ಕಾಯಾ, ವಾಚಾ, ಮನಸಾ ಒಂದಾಗಿ ದುಡಿದಾಗಲೇ ಒಂದು ಕೆಲಸದಲ್ಲಿ ಉತ್ತಮ ಫಲಿತಾಂಶ ಕಾಣುತ್ತೇವೆ. ಒಂದು ಬಲವಾದ ಹಗ್ಗವನ್ನು ತಯಾರಿಸಬೇಕಾದರೆ ಮೂರು ಎಳೆಗಳಿರಬೇಕು. ಮೂರು ಎಳೆಗಳು ಹಾಸು-ಹೊಕ್ಕಿನಂತಲ್ಲ. ಬಿಡಿ-ಬಿಡಿ ಎಳೆಗಳು, ಸ್ವತಂತ್ರವಾದವು. ಪರಸ್ಪರ ಪೂರಕವಾಗಿ ಹೊಸೆದಾಗ ‘ಹಗ್ಗ’ವಾಗುತ್ತದೆ, ಉಪಯೋಗಿ ವಸ್ತುವಾಗುತ್ತದೆ. ಮೂರೂ ಎಳೆಗಳು ಒಂದಾದಾಗ ಆಗುವ ಕೆಲಸ ಲೋಕಹಿತಕ್ಕೆ ಒತ್ತುಕೊಡುತ್ತವೆ. ಪ್ರಸ್ತುತ ದಿವ್ಯತ್ರಯರ ಜೀವನದ ವಿಶೇಷತೆಯನ್ನು ಕುರಿತಾದ ಒಂದು ಚಿಂತನೆ. ಮೂವರೂ ವ್ಯಕ್ತಿ ಸ್ವಾತಂತ್ರ್ಯ ಉಳ್ಳವರು; ಭಾವನೆಗಳು ಭಿನ್ನ, ಸಾಧನೆಗಳು ಭಿನ್ನ, ಆಚರಣೆಗಳೂ ಭಿನ್ನ. ಆದರೆ ಮೂವರ ಸಾಧನೆಯ ಫಲಗಳು ಕೂಡಿದಾಗ ಆದ ಪರಿಣಾಮ ಲೋಕಕಲ್ಯಾಣ, ಧರ್ಮಸಂಸ್ಥಾಪನೆ. ಸಂಕ್ರಮಣ ಕಾಲದಲ್ಲಿದ್ದ ಸಾಮಾಜಿಕ ಗೊಂದಲಕ್ಕೆ, ಅವ್ಯವಸ್ಥೆಗೆ ಕಡಿವಾಣ ಹಾಕಿದಂತಾಗಿ ನವಯುಗಕ್ಕೆ ನಾಂದಿಯಾಯಿತು.

ಸಮಾಜದಲ್ಲಿ ಜಾತಿ, ಮತಗಳ ಕಲಹ, ದೇವರು-ಧರ್ಮಗಳಿಗಾಗಿ ಭಿನ್ನಾಭಿಪ್ರಾಯಗಳಿಂದ ಹೋರಾಟ, ಜನಜೀವನ ಅತ್ಯಂತ ಶೋಚನೀಯ ಸ್ಥಿತಿಯಲ್ಲಿತ್ತು. ಶಾಂತಿ, ನೆಮ್ಮದಿ ಎನ್ನುವುದು ಕಾಡುಪಾಲಾಗಿದ್ದಿತು. ಅನ್ಯಾಯ, ಅತ್ಯಾಚಾರ, ಮೂಢನಂಬಿಕೆಗಳಿಂದ ಆಗುತ್ತಿದ್ದ ಕಿರುಕುಳಗಳ ಜೊತೆಗೆ ಜನರ ಅಜ್ಞಾನವೂ ಸೇರಿ ಸನಾತನ ಧರ್ಮದ ಮೇಲೆ ಧೂಳು ಮುಸುಕಿ, ತಿರುಳನ್ನು ಬಿಟ್ಟು ಕರಟವನ್ನು ನಂಬಿದರು. ಶತ-ಶತಮಾನಗಳ ಪರಕೀಯರ ಆಳ್ವಿಕೆಯಿಂದ ಮಾನಸಿಕವಾಗಿಯೂ ನೊಂದು ಬಸವಳಿದಿದ್ದ ಸಮಾಜಕ್ಕೆ ಸರಿಯಾದ ಮಾರ್ಗದರ್ಶಿಯ ಆವಶ್ಯಕತೆ ಇತ್ತು. ಇದು ಅಸ್ತ್ರ-ಶಸ್ತ್ರಗಳ ಮೂಲಕ ಅಸಾಧ್ಯವಾದದ್ದು, ಆಗಾಗ ಕೆಲವು ಮಹನೀಯರು ಅಧರ್ಮದ ವಿರುದ್ಧ ಹೋರಾಡಿ, ಅಲ್ಪ-ಸ್ವಲ್ಪ ಪರಿವರ್ತನೆಯಲ್ಲಿ ಮುನ್ನಡೆದಿದ್ದರು. ಮಾನಸಿಕ ಪರಿವರ್ತನೆಯ ಹಾದಿಯಲ್ಲಿ ನಡೆಸುವ ನಾಯಕನ ಅಗತ್ಯವಿತ್ತು. ಶ್ರೀರಾಮಕೃಷ್ಣರು ಇದನ್ನು ಸಾಧಿಸಿ, ಪ್ರಮಾಣೀಕರಿಸಿದರು. ಪ್ರಯೋಗಿಸಿದ್ದು, ದೃಢವಾದ, ಸಂಕಲ್ಪಸಿದ್ಧಿಯಾದ ವಾಗಸ್ತ್ರ! ಜೊತೆಗೆ ಕೈಜೋಡಿಸಿ ಸಹಕರಿಸಿದವರು ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು!

**ಉದ್ದೇಶ:** ಶ್ರೀರಾಮಕೃಷ್ಣರು ಪ್ರಕೃತಿಯ ರಹಸ್ಯವನ್ನು ಅರಿಯಬೇಕೆಂದು ಕಠಿಣ ಸಾಧನೆಯ ಮೂಲಕ ಸಾಕ್ಷಾತ್ಕರಿಸಿಕೊಂಡದ್ದು ‘ಜಗವೆಲ್ಲ ಶಿವಮಯ; ಜೀವ-ಶಿವ ಅಭೇದ; ಜೀವ ಸೇವೆಯೇ ದೇವ ಸೇವೆ; ದೇವನೊಬ್ಬ ನಾಮ ಹಲವು’ ಎಂಬ ದಿವ್ಯಮಂತ್ರಗಳು! ಆಗಿನ ಸಾಮಾಜಿಕ ಪರಿಸ್ಥಿತಿಯ ಪರಿವರ್ತನೆಗೆ ಇದು ಸಹಕಾರಿಯಾಯಿತು ಎಂಬುದು ನಿಸ್ಸಂದೇಹ!

ಶಾರದಾದೇವಿಯವರು ಭಾರತೀಯ ನಾರಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ‘ಪತಿಗೆ ತಕ್ಕ ಸತಿಯಾಗಿ ಬಾಳುತ್ತೇನೆ’ ಎಂಬ ಹಾದಿಯಲ್ಲಿ ನಡೆದು, ಶ್ರೀರಾಮಕೃಷ್ಣರ ಸಾಧನೆಗೆ, ಅವತಾರ ಕಾರ್ಯಕ್ಕೆ ಶಕ್ತಿಯಾಗಿ, ಕರ್ಮಯೋಗಿನಿಯಾಗಿ ಬೆಂಬಲಿಸಿದರು.

ಸ್ವಾಮಿ ವಿವೇಕಾನಂದರು ಜಿಜ್ಞಾಸು! ದೇವರಿದ್ದಾನೆಯೆ? ಎಂಬ ಸಂಶಯದಲ್ಲಿದ್ದವರು, ಸಾಧಿಸಿದ್ದು – ‘ದೀನದೇವೋಭವ; ದರಿದ್ರದೇವೋಭವ’ ಎಂದು, ‘ಜೀವಸೇವೆಯೇ ದೇವಸೇವೆ’ ಎಂಬ ತತ್ತ್ವಕ್ಕೆ ಒತ್ತುಕೊಟ್ಟು, ‘ದೇವರು-ಧರ್ಮ’ಕ್ಕೆ ವಿಶಾಲವಾದ ಅರ್ಥವನ್ನು ಜಗತ್ತಿಗೆ ಪರಿಚಯಿಸಿದರು. ಮೂವರ ಸಾಧನೆಗಳು ಭಿನ್ನವಾದರೂ ಲೋಕಕಲ್ಯಾಣ ಕಾರ್ಯದಲ್ಲಿ ಪರಸ್ಪರ ಒಮ್ಮತವಾಯಿತೆನ್ನಲು ಅಡ್ಡಿಯಿಲ್ಲ. ‘ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ’ ಎಂಬ ಧ್ಯೇಯವು ಸಾಮಾಜಿಕ ಕ್ರಾಂತಿಯೇ ಆಗಿ ಹೊಸ ಸಂದೇಶವನ್ನು ಸಾರುವುದರಲ್ಲಿ ಯಶಸ್ವಿಯಾಯಿತು. ಇದು ಯುಗ ಪರಿವರ್ತನೆಗೆ ನಾಂದಿ ಹಾಡಿತು. ಶ್ರೀರಾಮಕೃಷ್ಣರ ‘ವಚನವೇದ’ ಪಂಡಿತ ಪಾಮರರಿಗೆಲ್ಲ ಅಮೃತ ಸಿಂಚನ ಮಾಡಿತು. ಇದು ‘ದೇವರು-ಧರ್ಮ’ದ ಗೊಂದಲಕ್ಕೆ ಇತಿಶ್ರೀ ಹಾಡಿತು ಎನ್ನಬಹುದು.

ದಿವ್ಯತ್ರಯರ ಜೀವನ-ಸಾಧನೆಯನ್ನು ಕುರಿತು ಚಿಂತಿಸುವಾಗ 'ಭಿನ್ನತೆಯಲ್ಲಿ ಏಕತೆ'ಯನ್ನು ಕಾಣುವ ವಿಷಯಗಳನ್ನು ಸ್ಥೂಲವಾಗಿ ನೋಡೋಣ.

**ದೈವಾಂಶ ಸಂಭೂತರು:** ಶ್ರೀರಾಮಕೃಷ್ಣರ ತಂದೆ ಖುದಿರಾಮ ಚಟ್ಟೋಪಾಧ್ಯಾಯರು. ಗಯೆಯಲ್ಲಿ ಪಿತೃಕಾರ್ಯವನ್ನು ಶ್ರದ್ಧೆಯಿಂದ ಆಚರಿಸಿದರು. ರಾತ್ರಿ ಸ್ವಪ್ನದಲ್ಲಿ ಗದಾಧರ ವಿಷ್ಣುವು 'ನಾನು ನಿನ್ನ ಕಾರ್ಯದಿಂದ ತೃಪ್ತನಾಗಿದ್ದೇನೆ. ನಿನ್ನ ಮನೆಯಲ್ಲಿ ಜನಿಸುತ್ತೇನೆ' ಎಂದು ಸೂಚನೆ ಕೊಟ್ಟನು. ಶ್ರೀರಾಮಕೃಷ್ಣರ ತಾಯಿ ಚಂದ್ರಮಣಿದೇವಿಯವರಿಗೂ ದೈವದರ್ಶನವಾಯಿತು. ಈ ರೀತಿ ಗದಾಧರ ವಿಷ್ಣುವಿನ ಕೃಪೆಯಿಂದ, ಪ್ರಸಾದ ರೂಪವಾಗಿ ದಂಪತಿಗಳಿಗೆ ಜನಿಸಿದ ಮಗುವಿಗೆ ಬಾಲ್ಯದ ಹೆಸರು ಗದಾಧರನೆಂದೇ ಆಯಿತು. 'ರಾಮಕೃಷ್ಣ' ಎಂಬುದು ವ್ಯವಹಾರದಲ್ಲಿ ಮೆರೆಯಿತು.

ಶಾರದಾದೇವಿಯವರ ತಂದೆ ರಾಮಚಂದ್ರಮುಖರ್ಜಿ, ತಾಯಿ ಶ್ಯಾಮಾಸುಂದರಿ ದೇವಿ. ಸರಳರೂ ಸಜ್ಜನರೂ, ಆಸ್ತಿಕರೂ ಸಂಪ್ರದಾಯಸ್ಥರೂ ಆದ ದಂಪತಿಗಳು. ಒಂದು ಸಲ ಶ್ಯಾಮಾಸುಂದರಿ ದೇವಿ ತಮ್ಮ ತವರೂರಾದ ಸಿಹೋರಿಗೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದಾಗ ಆಯಾಸಗೊಂಡು ಒಂದು ಮರದ ಕೆಳಗೆ ವಿಶ್ರಾಂತಿಗಾಗಿ ಕುಳಿತರು. ಸ್ವಲ್ಪ ಮೈಮರೆತಂತಾದಾಗ, ಸಾಲಂಕೃತ ಬಾಲಿಕೆಯೊಬ್ಬಳು ಮರದಿಂದಿಳಿದು ಬಂದು 'ನಾನು ನಿಮ್ಮ ಮನೆಗ ಬರುತ್ತೇನೆ' ಎಂದಂತಾಗಿ ಮುನ್ಸೂಚನೆ ಕೊಟ್ಟಳು. ಇದೇ ರೀತಿ ರಾಮಚಂದ್ರ ಮುಖರ್ಜಿಯವರಿಗೂ ಸಹ ಒಂದು ಪ್ರಯಾಣದ ಸಮಯದಲ್ಲಿ ಗೋಚರಿಸಿ 'ನಾನು ಆದಿಶಕ್ತಿ , ನಿಮ್ಮ ಮನೆಗೆ ಬರುತ್ತೇನೆ' ಎಂದು ಸ್ಪಷ್ಟವಾಗಿ ತಿಳಿಸಿದಳು. ಈ ದಂಪತಿಗಳ ಮೊದಲನೇ ಸಂತಾನವೇ 'ಶಾರದಾದೇವಿ'!

ಸ್ವಾಮಿ ವಿವೇಕಾನಂದರು ಕೊಲ್ಕತ್ತಾದ ಶ್ರೀಮಂತ ವಕೀಲರಾದ ವಿಶ್ವನಾಥ ದತ್ತ ಮತ್ತು ಭುವನೇಶ್ವರೀದೇವಿ ದಂಪತಿಗಳಿಗೆ ಕಾಶಿ ವಿಶ್ವೇಶ್ವರನ ಕೃಪಾಪ್ರಸಾದವಾಗಿ ಜನಿಸಿದವರು. ಬಾಲ್ಯದ ಹೆಸರು ವೀರೇಶ್ವರ ಎಂದೇ ಆಗಿತ್ತು. ವಿಶೇಷವಾಗಿ ತಾತ ದುರ್ಗಾಚರಣ ದತ್ತ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಅಧ್ಯಾತ್ಮದತ್ತ ಮುನ್ನಡೆದವರು. ಹೀಗೆ ಮೂವರೂ ಮಹಾ ದೈವಸಂಘಟಕರು!

**ಸಂಕಲ್ಪ ಸಿದ್ಧರು:** ಶ್ರೀರಾಮಕೃಷ್ಣರು ಬಾಲ್ಯದಲ್ಲಿ ಕಂಡ ಪ್ರಕೃತಿಯ ಸೊಬಗೊಂದು ಅವರನ್ನು ಮಹಾಕಾರ್ಯಕ್ಕೆ ತೊಡಗಿಸಿತು. ಪ್ರಕೃತಿಯ ವೈಚಿತ್ರ್ಯದ ಹಿಂದಿನ ಶಕ್ತಿಯಾವುದು? ಇದನ್ನು ಅರಿಯುವ ಸಂಕಲ್ಪ ಮಾಡಿದರು. ಸಾಮಾನ್ಯರಂತೆ ಹತ್ತೂ ಜನರ ಮಧ್ಯೆ ಬೆಳೆದರೂ, ಏಕಾಂತಪ್ರಿಯರು, ಸತ್ಯನಿಷ್ಠರು, ಆಸ್ತಿಕರು; ಇವರ ಸಂಕಲ್ಪಕ್ಕೆ ದೈವ ಕೃಪೆಯೂ ಸೇರಿತು. ಬಾಲ್ಯ ಕಳೆದು ಯೌವನಕ್ಕೆ ಕಾಲಿಟ್ಟಾಗ, ಸಾಧನೆಗೆ ತಕ್ಕ ವೇದಿಕೆಯಾಗಿದ್ದು ದಕ್ಷಿಣೇಶ್ವರದ ಭವತಾರಿಣಿಯ ಸನ್ನಿಧಿ! ದೇವಿ ಲೋಕಕಲ್ಯಾಣಕ್ಕಾಗಿ ಇವರನ್ನು ಆರಿಸಿಕೊಂಡಳು; ಇಲ್ಲಿ ಸಾಧನೆ ಮಾಡಿ ಸಿದ್ಧಿ ಪಡೆದು, ಲೋಕಕಲ್ಯಾಣಕ್ಕಾಗಿ ಬಾಳಿದರು. ಜಗದ್ಗುರುಗಳೆನಿಸಿದರು!

ಶಾರದಾದೇವಿಯವರಿಗೆ ವಿವಾಹವಾದಾಗ ಕೇವಲ ಐದೂವರೆ ವರ್ಷ! ತಾನು ವಿವಾಹಿತೆ ಎಂದರಿತದ್ದು ಎರಡು ವರ್ಷಗಳ ನಂತರ. ಸರಿಯಾಗಿ ಪತಿಯ ಪರಿಚಯವಿಲ್ಲ , ಪತಿಯ ಸ್ವಭಾವದರಿವಿಲ್ಲ. ಅರಿವು ಮೂಡಿದಾಗ, ಪತಿಯ ಸ್ವಭಾವ ಎಲ್ಲರಂತಲ್ಲ ಎಂದು ತಿಳಿದರೂ ಹಿಮ್ಮೆಟ್ಟಲಿಲ್ಲ. ನವಯುವತಿ ಶಾರದಾದೇವಿಯವರು, ಪತಿಗೆ ಅನಾರೋಗ್ಯವೆಂದು ತಿಳದು 'ಸತಿ'ಯ ಕರ್ತವ್ಯವನ್ನು ನಿರ್ವಹಿಸಲು ಧಾವಿಸಿ, ಪತಿಯಿದ್ದಡೆಗೆ ಬಂದರು. ಸಮಾಜ ಯಾವ ಸಂಪ್ರದಾಯಗಳಿಗೂ ಅಂಜದೆ, ಅಳುಕದೆ, ದಿಟ್ಟ ಹೆಜ್ಜೆಯನ್ನಿಟ್ಟು ದಕ್ಷಿಣೇಶ್ವರಕ್ಕೆ ಪತಿಯ ಬಳಿಗೆ ಬಂದ ಸಾಧ್ವೀ ಮಣಿ! ತಾವು ಮಾಡುವ ಪ್ರತಿ ಕೆಲಸದ ಹಿಂದೆಯೂ 'ಪತಿ'ಗಾಗಿ ಎಂಬುದೊಂದೇ ವ್ರತ! ಶ್ರೀರಾಮಕೃಷ್ಣರ ಶಕ್ತಿಯಾಗಿ, ಕಾಯಕವೇ ಕೈಲಾಸವೆಂದರಿತ ಕರ್ಮಯೋಗಿ! ಸಂಕಲ್ಪದಂತೆ ಸಾಧಿಸಿ ಸಿದ್ಧಿ ಪಡೆದರು; ಜಗನ್ಮಾತೆಯಾದರು!

ನರೇಂದ್ರನಾಥನ ತಂದೆ ವಿಶ್ವನಾಥ ದತ್ತ ಕೋಲ್ಕತ್ತೆಯ ಪ್ರಸಿದ್ಧ ಶ್ರೀಮಂತ ವಕೀಲ. ತಾಯಿ ಭುವನೇಶ್ವರೀದೇವಿ ಸದ್ಗೃಹಿಣಿ, ದೈವಭಕ್ತೆ. ಸಿರಿವಂತ ಮನೆಯಲ್ಲಿ ಹುಟ್ಟಿದರೂ ನರೇಂದ್ರ ಬಾಲ್ಯದಿಂದಲೂ ತ್ಯಾಗ, ಸೇವೆ, ಧ್ಯಾನ, ಸರಳತೆ ಇತ್ಯಾದಿಗಳಿಂದ ಭೋಗಜೀವನಕ್ಕಿಂತ ಯೋಗಜೀವನದ ಕಡೆ ಆಕರ್ಷಿತನಾಗಿದ್ದನು. ದೇವರಲ್ಲಿ ನಂಬಿಕೆ ಇದ್ದರೂ 'ದೇವರಿದ್ದಾನೆಯೆ?' ಎಂಬ ಸಂಶಯ ಪರಿಹಾರಕ್ಕಾಗಿ ಅನೇಕ ಮಹನೀಯರನ್ನು ಕಂಡರೂ ಸಮಾಧಾನವಾಗಿರಲಿಲ್ಲ. ಇವರು ಓದುತ್ತಿದ್ದ ಕಾಲೇಜಿನ ಪ್ರಾಧ್ಯಾಪಕರೊಬ್ಬರು ಒಂದು ದಿನ ಪಾಠಮಾಡುತ್ತಿದ್ದಾಗ ''ಪ್ರಕೃತಿಯ ಅಣು-ಅಣುವಿನಲ್ಲಿಯೂ ದೇವರನ್ನು ಕಂಡು ಆನಂದಿಸುತ್ತಿರುವ ಪರಮಹಂಸರೊಬ್ಬರು ದಕ್ಷಿಣೇಶ್ವರದಲ್ಲಿದ್ದಾರೆ' ಎಂದು ಹೇಳಿದ್ದು ನರೇಂದ್ರನಿಗೆ ದಾರಿದೀಪವಾದಂತಾಯಿತು. ದಕ್ಷಿಣೇಶ್ವರಕ್ಕೆ ಬಂದ, ಶ್ರೀರಾಮಕೃಷ್ಣರನ್ನು ಕಂಡ! ಎಂದಿನಂತೆಯೇ ಪ್ರಶ್ನಿಸಿದ 'ದೇವರಿದ್ದಾನೆಯೆ?' ಯಾವ ಅಡೆ-ತಡೆ ಇಲ್ಲದೆ ಸರಳವಾಗಿ, ಸಲೀಸಾಗಿ 'ದೇವರಿದ್ದಾನೆ. ಈಗ ನಾನು ನಿನ್ನನ್ನು ಕಾಣುತ್ತಿರುವುದಕ್ಕಿಂತಲೂ ಸ್ಪಷ್ಟವಾಗಿ ಕಾಣಬಹುದು. ಆದರೆ ದೇವರು ಯಾರಿಗೆ ಬೇಕಾಗಿದೆ? ಹೆಂಡತಿ, ಮಕ್ಕಳಿಗಾಗಿ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾರೆ. ದೇವರಿಗಾಗಿ ಅಳುವವರಾರಿದ್ದಾರೆ?' ಎಂಬ ಉತ್ತರ ನರೇಂದ್ರನ ಮನಸ್ಸಿಗೆ ತಾಕಿತು. ಛಲವಾದಿ ಯುವಕ ಶ್ರೀರಾಮಕೃಷ್ಣರ ಬಳಿ ತನ್ನ ಸಮಸ್ಯೆಗಳಿಗೆಲ್ಲ ಪರಿಹಾರವನ್ನು ಕಂಡುಕೊಂಡ. ಅಷ್ಟೇ ಅಲ್ಲ. ಶ್ರೀರಾಮಕೃಷ್ಣರು ಸಾಕ್ಷಾತ್ಕರಿಸಿಕೊಂಡ ದಿವ್ಯಮಂತ್ರಗಳನ್ನು ಜಗತ್ತಿಗೇ ಸಾರಿದ. ದೇವರು-ಧರ್ಮಗಳ ಅರ್ಥವನ್ನು ವಿಸ್ತಾರಗೊಳಿಸಿ, ವಿಶ್ವವಿಜೇತ ಸಂನ್ಯಾಸಿಯಾದ!

ಮೂವರೂ ಸತ್ಯನಿಷ್ಠರು, ಸರಳಜೀವಿಗಳು, ಧರ್ಮಪರಾಯಣರು, ಲೋಕಹಿತಚಿಂತಕರು. ದಕ್ಷಿಣೇಶ್ವರದ ಭವತಾರಿಣಿಯ ಸನ್ನಿಧಿಯಲ್ಲಿಯೇ ಮೂವರೂ ತಮ್ಮ-ತಮ್ಮ ಸಂಕಲ್ಪದಲ್ಲಿ ಸಿದ್ಧಿ ಪಡೆದರು! ಮೂವರ ಜೀವನದಲ್ಲಿಯೂ ಪರಿವರ್ತನೆಯ ಪ್ರಮುಖ ಘಟ್ಟ, ಹಾಗೂ ಅದರಿಂದಾದ ಪರಿಣಾಮದ ಬಗ್ಗೆ ಗಮನ ಹರಿಸಿದಾಗ ಅದ್ಭುತವಾದ ತ್ಯಾಗವನ್ನು ಕಾಣುತ್ತೇವೆ. ಶ್ರೀರಾಮಕೃಷ್ಣರೇ ಹೇಳುತ್ತಿದ್ದಂತೆ 'ಒಂದನ್ನು ಪಡೆಯಬೇಕಾದರೆ ಮತ್ತೊಂದನ್ನು ತ್ಯಾಗ ಮಾಡಲೇಬೇಕು'. ಮೂವರ ತ್ಯಾಗದ ವಿಶೇಷತೆ ಏನು? ನೋಡೋಣ.

ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಸಾಧನೆಯ ತುತ್ತತುದಿಯಲ್ಲಿದ್ದಾಗ ವಿವಾಹವಾದರು. ಇದು ಒಂದು ರೀತಿಯಲ್ಲಿ ಜಗತ್ತಿಗೆ ಸಂದೇಶ